ದಿನಾಂಕ : 18.06.2022 ಓ.ಎಸ್ ನಂ.4/2012 ರಲ್ಲಿ

ಡಿ.ಡಬ್ಲ್ಯೂ-1(ಅಶೋಕ್ ಕುಮಾರ್ ಗಾಂಧಿ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎ ಎನ್ ಕೆ ವಕೀಲರಿಂದಃ

ನಿಡಿ-44 ರಿಂದ ನಿಡಿ-50 ರ ವರೆಗಿನ ದಾಖಲಾತಿಗಳಲ್ಲಿ ತೋರಿಸಿರುವಂತೆ ಚೆಕ್ ಮುಖಾಂತ ಹಣವನ್ನು ನೀಡುರುತ್ತೇನೆ, ಇದೂ ಅಲ್ಲದೆ ಹಣವನ್ನು ಬೇರೆ ಚೆಕ್ಗಳ ಮುಖಾಂತರವೂ ಸಹ ನೀಡಿರುತ್ತೇನೆ. ನಿಡಿ-44 ರಿಂದ ನಿಡಿ-50 ಅನ್ನು ಹೊರತುಪಡಿಸಿ ಬೇರೆ ಹಣವನ್ನು ಚೆಕ್ ಮುಖಾಂತ ನೀಡಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ನನಗೆ ನೆನಪು ಇರುವುದಿಲ್ಲ. ನಿಡಿ-44 ರಿಂದ ನಿಡಿ-50 ಅನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ದಾಖಲಾತಿಗಳನ್ನು ಹಣ ನೀಡಿರುವ ಬಗ್ಗೆ ನ್ಯಾಯಾಲಯದಲ್ಲಿ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

ನಿಡಿ-44 ರಲ್ಲಿ ತೋರಿಸಿರುವ 10 ಜನರ ಹೆಸರಿಗೆ ಹೋಗಿರುವಂತ ಹಣವು ದಾವಾ ಆಸ್ತಿಯ ಪಕ್ಕದ ಜಮೀನನ್ನು ಖರೀದಿಸಲು ನೀಡಿರುವಂತಹ ಹಣದ ವಿವರ ಇರುತ್ತದೆ. ಸದರಿ 10 ಜನರ ಹೆಸರಿಗೆ ಹೋಗಿರುವ ಹಣದ ವಿವರವು ಅವರಿಗೆ ಕೈ ಸಾಲ ನೀಡಿರುವ ಬಗೆಗಿನ ವಿವರ ಇರುತ್ತದೆ ಎಂದರೆ ಸರಿಯಲ್ಲ. ನಿಡಿ-49 ರಲ್ಲಿ ತೋರಿಸಿರುವ ಕೊನೆಯ 4 ಜನರ ಹೆಸರಿಗೆ ಪಾವತಿಸಿರುವ ಹಣವು ದಾವಾ ಸ್ವತ್ತಿನ ಸುತ್ತಮುತ್ತಲಿನ ಸ್ವತ್ತನ್ನು ಖರೀದಿಸಲು ನೀಡಿರುವಂತಹ ಹಣದ ವಿವರ ಇರುತ್ತದೆ. ಸದರಿ 4 ಜನರ ಹೆಸರಿಗೆ ಹೋಗಿರು ಹಣದ ವಿವರವೂ ಸಹ ಕೈಸಾಲ ನೀಡಿರುವ ಹಣದ ವಿವರ ಆಗಿರುತ್ತದೆ ಎಂದರೆ ಸರಿಯಲ್ಲ.

ನಿಡಿ-44 ರಿಂದ ನಿಡಿ-50 ರ ದಾಖಲೆಗಳ ಪ್ರಕಾರ ಪ್ರತಿವಾದಿ-1 ರವರಿಗೆ ಒಟ್ಟು ಹಣ ಪಾವತಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಅದನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-44 ರಿಂದ ನಿಡಿ-50 ರ ವರೆಗಿನ ದಾಖಲೆಗಳ ಪ್ರಕಾರ ಪ್ರತಿವಾದಿ-1 ರವರಿಗೆ ರೂ.47,75,000/- ಗಳನ್ನು ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ಲೆಕ್ಕ ಮಾಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿ-4 ಕಂಪನಿಯವರು ಇಂಕಂಮ್ ಟ್ಯಾಕ್ಸ್ ತೆರಿಗೆ ಪಾವತಿದಾರರಾಗಿರುತ್ತಾರೆ. ನಾನು ಪ್ರತಿವರ್ಷ ಪ್ರತಿವಾದಿ-4 ರವರ ಪರವಾಗಿ ವಾರ್ಷಿಕ ತೆರಿಗೆ ಪಾವತಿಸುತ್ತಿರುತ್ತೇನೆ. 2007 ರಿಂದ 2010 ರವರಗೆ ಪ್ರತಿವಾದಿ-4 ರವರ ಪರವಾಗಿ ಹಣವನ್ನು ಪ್ರತಿವಾದಿ-1 ರವರಿಗೆ ನೀಡಿದ ಬಗ್ಗೆ ವಾರ್ಷಿಕ ಆದಾಯ ತೆರಿಗೆಯಲ್ಲಿ ತೋರಿಸಿರುತ್ತೇನೆ. ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಯಾವುದೇ 20 ಸಾವಿರ ರೂ ಹೆಚ್ಚಿನ ನಗದು ಹಣದ ವ್ಯವಹಾರ ಮಾಡಬೇಕಾದರೆ ಅದನ್ನು ಚೆಕ್ ಮೂಲಕ ಮಾಡಬೇಕು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ-1 ರವರಿಗೆ ಯಾವುದೇ ಹಣವನ್ನು ನಗದು ರೂಪದಲ್ಲಿ ನೀಡದಿದ್ದರೂ ಸಹ ನೀಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-18 ರಿಂದ ನಿಡಿ-23 ರವರೆಗಿನ ದಾಖಲಾತಿಗಳನ್ನು ಮಾಡುವ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿ-3 ರವರು ಅಪ್ರಾಪ್ತರಾಗಿದ್ದರು

ಎಂದರೆ ಸಾಕ್ಷಿಯು ವಾದಿಯವರು ಮಾತ್ರ ಅಪ್ರಪ್ತರಾಗಿದ್ದರು ಎಂದು ನುಡಿಯುತ್ತಾರೆ. ನಿಡಿ-18 ರಿಂದ ನಿಡಿ-23 ದಾಖಲಾತಿಗಳನ್ನು ತಯಾರಿಸುವ ಸಮಯದಲ್ಲಿ ಪ್ರತಿವಾದಿ-3 ರವರು ಅಪ್ರಪ್ತರಾಗಿದ್ದರು ಎಂದರೆ ಸಾಕ್ಷಿಯು ಕೆಲವೊಂದು ದಾಖಲೆಗಳನ್ನು ತಯಾರಿಸುವ ಸಮಯದಲ್ಲಿ ಅಪ್ರಾಪ್ತರಿದ್ದರು ಮತ್ತು ಕೆಲವೊಂದರಲ್ಲಿ ಅವರು ವಯಸ್ಕರಾಗಿದ್ದರು ಎಂದು ನುಡಿಯುತ್ತಾರೆ. ನಿಡಿ-23 ದಾಖಲೆಯಲ್ಲಿ ಪ್ರತಿವಾದಿ 3 ರವರ ವಯಸ್ಸು 18 ವರ್ಷ ಎಂದು ತೋರಿಸಲಾಗಿರುತ್ತದೆ, ಆದರೆ ಆ ದಾಖಲೆ ತಯಾರಿಸುವ ಸಮಯದಲ್ಲಿ ಅವರು ಇನ್ನು ಅಪ್ರಾಪ್ತರಾಗಿದ್ದರು ಎಂದರೆ ಸರಿಯಲ್ಲ.

ಸಾಕ್ಷಿಗೆ ನೀವು ಯಾವ ಆಧಾರದಲ್ಲಿ ಪ್ರತಿವಾದಿ-3 ರವರು ನಿಡಿ-23 ತಯಾರಿಸುವ ಸಮಯದಲ್ಲಿ ವಯಸ್ಕರಾಗಿದ್ದರು ಎಂದು ಹೇಳುವಿರಾ ಎಂದರೆ ಸಾಕ್ಷಿಯು ಸದರಿ ದಾಖಲಾತಿ ಆಗುವ 2 ದಿನದ ಮೊದಲು ಅವರ ಮಧ್ಯೆ ವಿಭಾಗ ಪತ್ರವನ್ನು ದಿನಾಂಕಃ15.04.2010 ರಂದು ಮಾಡಿಕೊಂಡಿದ್ದರು ಅದರಲ್ಲಿ ಪ್ರತಿವಾದಿ 3 ರವರ ವಯಸ್ಸನ್ನು 18 ತೋರಿಸಲಾಗಿತ್ತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪ್ರತಿವಾದಿ-3 ರವರು ವಯಸ್ಕರಾಗಿದ್ದ ಬಗ್ಗೆ ಕಾನೂನು ರೀತಿಯ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ಅಪ್ರಾಪ್ತ ವಯಸ್ಕರಿಗೆ ಸಂಬಂಧಪಟ್ಟ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನ್ಯಾಯಾಲಯದಿಂದ ಅನುಮತಿ ಪಡೆದು ಖರೀದಿಸ ಬೇಕು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಹಿಂದೆ ನೀವು ಹೇಳಿದಂತೆ ದಾವಾ

ದಿನಾಂಕ : 18.06.2022 ಓ.ಎಸ್ ನಂ.4/2012 ರಲ್ಲಿ
ಡಿ.ಡಬ್ಲ್ಯೂ-1(ಅಶೋಕ್ ಕುಮಾರ್ ಗಾಂಧಿ)

ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ವಕೀಲರಿಂದ ಕಾನೂನಿನ ತಿಳುವಳಿಕೆ ಪಡೆದುಕೊಂಡಿರುತ್ತೀರಾ ಆ ಸಮಯದಲ್ಲಿ ವಕೀಲರು ನಿಮಗೆ ಅಪ್ರಾಪ್ತರ ಆಸ್ತಿಯನ್ನು ಖರೀದಿಸಲು ಬರುವುದಿಲ್ಲ ಎಂದು ತಿಳಿಸಿರಲಿಲ್ಲವೇ ಎಂದರೆ ಸಾಕ್ಷಿಯು ಅಪ್ರಾಪ್ತ ರ ಪರವಾಗಿ ಅವರ ತಂದೆಯಿಂದ ಖರೀದಿಸಬಹುದು ಎಂದು ಸೂಚಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ವಕೀಲರು ಲಿಖಿತ ಬರವಣಿಗೆ ಯ ಮುಖಾಂತರ ಕಾನೂನಿನ ಸಲಹೆ ನೀಡಿರುತ್ತಾರೆ ಎಂದರೆ ಪರಿಶೀಲಿಸಿ ನೋಡಬೇಕು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.